ಆ) ಇದರಲ್ಲಿ 01 01 2002 ರ ನಂತರ ರಾಜ್ಯ ಸರ್ಕಾರದ ಪಾಲು ರೂ 118 038 ಕೋಟಿಗಳು

ಇ) ಈ ಯೋಜನೆಗೆ ಕಳೆದ 5 ವರ್ಷಗಳಲ್ಲಿ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾದ ಹಣದ ವಿವರ ಈ ಕೆಳಗಿನಂತಿದೆ

ವರ್ಷ	ಬಿಡುಗಡೆಯಾದ ಮೊತ್ತ (ಕೋಟಿ ರೂ ಗಳಲ್ಲಿ)
2002–2003	2 00
2003–2004	11 00
2004–2005	23 00
2005–2006	53 36
2006–2007	20 00
ಒಟ್ಟು	109 36

ಈ) ರೈಲ್ವೆ ಇಲಾಖೆಗೆ ಈ ಹಣ ಮುಂದಿನ ಆರ್ಥಿಕ ವರ್ಷದಲ್ಲಿ ಬೇಕಾಗಿದ್ದು, ಆಗ ಬಿಡುಗಡೆ ಮಾಡಲಾಗುವುದು

403 (829) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಶ್ರೀ ಎಂ ಪಿ ಪ್ರಕಾಶ್ ಗೃಹ, ಕಾನೂನು, ನ್ಯಾಯಾ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ಕ್ಯಾಲೆಂಡರ್ ವರ್ಷಗಳಲ್ಲಿ ಸದನ ಕಲಾಪ ನಡೆಸಿದ ದಿನಗಳೆಷ್ಟು,

ಆ) ಕಾನೂನು ಪ್ರಕಾರ ಕನಿಷ್ಠ ದಿನಗಳಾದರೂ ಸದನ ನಡೆಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಇ) ಈ ಸದನದ ಇತಿಹಾಶದಲ್ಲಿ ಯಾವ ವರ್ಷ ಅತೀ ಹೆಚ್ಚು ದಿನ ಹಾಗೂ ಅತಿ ಕಡಿಮೆ ದಿನ ಕಲಾಪ ನಡೆಸಲಾಗಿದೆ, ಆಗ ಸರ್ಕಾರದ ನೇತೃತ್ವ ವಹಿಸಿದವರಾರು (ಮುಖ್ಯಮಂತ್ರಿಗಳಾರು),

ಈ) ಈ ವರ್ಷವಾದರೂ ಕಾನೂನು ಪ್ರಕಾರ ಕನಿಷ್ಟ ದಿನಗಳಾದರೂ ಸದನ ಕಲಾಪ ನಡೆಸಲು ಕ್ರಮ ಕೈಗೊಳ್ಳಲಾಗುವುದೇ,

ಉ) ಪಾರ್ಲಿಮೆಂಟಿನ ಹಾಗೆ ನಿಗದಿತ ಅವಧಿಯಲ್ಲಿ ಸನದ ಕೂಡುವ ಹಾಗೆ ಕಾನೂನಿನಲ್ಲಿ ಸೂಕ್ತ ಮಾರ್ಪಾಡು ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಮಾನ್ಯ ಶ್ರೀ ಎಂ ಪಿ ಪ್ರಕಾಶ್ ಗೃಹ, ಕಾನೂನು, ನ್ಯಾಯಾ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) 2002ನೇ ಸಾಲಿನಿಂದ 2006ನೇ ಸಾಲಿನವರೆಗೆ ಒಟ್ಟು 231 ದಿನಗಳಲ್ಲಿ ಸದನದ ಕಲಾಪ ನಡೆದಿದೆ

ಆ) ಯಾವುದೇ ತೊಂದರೆಗಳಿಲ್ಲಿ

ಇ) 2006ನೇ ಸಾಲಿನವರೆಗೆ ಅತಿ ಹೆಚ್ಚು ಅವಧಿಗೆ ಅಧಿವೇಶನವು 1963ನೇ ಸಾಲಿನಲ್ಲಿ 98 ದಿನಗಳ ವರೆಗೆ ನಡೆದಿದೆ ಆಗ ಸರ್ಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿಗಳು ಶ್ರೀ ಎಸ್ ನಿಜಲಿಂಗಪ್ಪ ನವರು 1971ನೇ ಸಾಲಿನಲ್ಲಿ 04 ದಿನಗಳು ಮಾತ್ರ ಅಧಿವೇಶನ ನಡೆದಿದೆ (ದಿನಾಂಕ 27 3 71 ರಿಂದ 20 3 72 ರವರೆಗೆ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಇತ್ತು) 1971ನೇ ಸಾಲಿನಲ್ಲಿ ಶ್ರಿ ವಿರೇಂದ್ರ ಪಾಟೀಲ್ ರವರು ರಾಜ್ಯದ ಮುಖ್ಯಮಂತ್ರಿಗಲಾಗಿದ್ದರು

ಈ) ಕನಿಷ್ಠ 60 ದಿವಸಗಳು ಸದನ ನಡೆಸುವ ಉದ್ದೇಶ ಸರ್ಕಾರಕ್ಕೆ ಇದೆ

ಉ) ವಿಧಾನ ಮಂಡಲದ ಅಧಿವೇಶನವನನು ಆಗಿಂದಾಗ್ಗೆ ಕರೆಯುವ ಬಗ್ಗೆ ಭಾರತ ಸಂವಿಧಾನದ 174ನೇ ಅನುಚ್ಛೇದ ಅನ್ವಯ ಹಾಗೂ ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪ ಗಳ ನಿರ್ವಹಣೆ ಅಧಿನಿಯಮ, 2005ರಡಿಯಲ್ಲಿ ಕ್ರಮ ಜರುಗಿಸಲಾಗುವುದು ಪಾರ್ಲಿಮೆಂಟಿನ ಮಾದರಿಯನ್ವಯ ಕಾನೂನನ್ನು ಮಾರ್ಪಾಡು ಮಾಡುವ ಉದ್ದೇಶವಿರುವುದಿಲ್ಲ

406 (339) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) . ಮಾನ್ಯ ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಈ ವರ್ಷ 31ರವರೆಗೆ ಮಸೀದಿಗಳಿಗೆ ಬಿಗಡೆ ಮಾಡಿದ ಅನುದಾನದೆಷ್ಟು ? (ಕ್ಷೇತ್ರವಾರು ವಿವರ ನೀಡುವುದು),